**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 03-04-2024.**

**ಮುಂದುವರೆದ ಪಾಟೀ ಸವಾಲು - 5 ರಿಂದ 7 ನೇ ಪ್ರತಿವಾದಿಗಳ ಪರ ವಕೀಲರಿಂದ :**

**1)** ದಾವಾಸ್ವತ್ತುಗಳಲ್ಲಿ ದೇವನಹಳ್ಳಿಯ ಕಾಂಪ್ಲೆಕ್ಸ್, ಚಿಕ್ಕನಹಳ್ಳಿಯ ಹೊಲ, ಮೈಲನಹಳ್ಳಿಯ ಹೊಲ, ಬಂಡಿಕೊಡಿಗೇನಹಳ್ಳಿಯಲ್ಲಿ ಗದ್ದೆಗಳು ಇರುತ್ತವೆ. ನನಗೆ ಸದರಿ ಸ್ವತ್ತುಗಳ ಸರ್ವೆ ಸಂಖ್ಯೆಗಳು ಗೊತ್ತಿಲ್ಲ. ಚಿಕ್ಕನಹಳ್ಳಿಯ ಬಳಿ 4 ಎಕರೆ 20 ಗುಂಟೆ ಇರುತ್ತದೆ. ಉಳಿದ ಸ್ವತ್ತುಗಳ ವಿಸ್ತೀರ್ಣ ಹಾಗೂ ಸರ್ವೆ ಸಂಖ್ಯೆಗಳು ನನಗೆ ಗೊತ್ತಿಲ್ಲ. ಬೆಂಗಳೂರಿನ ಕತ್ರಿಗುಪ್ಪೆ ಬಳಿ ಒಂದು ನಿವೇಶನ ಇದ್ದು, ಅದು ಈಗ ಮಾರಾಟ ಆಗಿರುತ್ತದೆ. ಸದರಿ ಸ್ಥಳದಲ್ಲಿ ಮೂರು ನಿವೇಶನಗಳು ಇದ್ದವು ಎಂದರೆ ಸರಿ. ಸದರಿ ಸ್ವತ್ತನ್ನು ಈ ದಾವೆ ದಾಖಲಿಸಿದ ನಂತರ ನಾವು ಮಾರಾಟ ಮಾಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಮರಣ ಹೊಂದಿದ 1-2 ವರ್ಷಗಳಲ್ಲಿ ಅದನ್ನು ಮಾರಾಟ ಮಾಡಿರುತ್ತೇನೆ. ನಮ್ಮ ತಂದೆ ಮರಣ ಹೊಂದಿದ 1-2 ವರ್ಷಗಳಲ್ಲಿ ಈ ದಾವೆ ದಾಖಲಿಸಿರುತ್ತೇನೆ. ನಿ.ಪಿ.1 ರಿಂದ ನಿ.ಪಿ.18 ನ್ನು ನಮ್ಮ ಅಕ್ಕ ವೆಂಕಟಮ್ಮ ನನಗೆ ನೀಡಿರುತ್ತಾರೆ. ನಿ.ಪಿ.19 ರಿಂದ ನಿ.ಪಿ.37 ನ್ನು ನನಗೆ ಯಾರು ನೀಡಿರುತ್ತಾರೆ ಎಂದರೆ ನಮ್ಮ ಅಕ್ಕ ನೀಡಿರಬಹುದು, ನನಗೆ ನೆನಪಿಲ್ಲ. ನಿ.ಪಿ.38 ರ ಮೇಲೆ ಇರುವ ಸಹಿ ನನ್ನದಲ್ಲ. ನಿ.ಪಿ.39 ರ ಮೇಲೆ ಪುಟ ಸಂಖ್ಯೆ 8 ರಲ್ಲಿ ನನ್ನ ಸಹಿ ಇದೆ ಎಂದು ಒಪ್ಪಿಕೊಳ್ಳುತ್ತೇನೆ. ನಿ.ಪಿ.38 ರ ಮೇಲೆ ಇರುವ ಸಹಿ ನನ್ನದಾಗಿದ್ದರೂ ಸಹ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.40 ಜಮೀನಿಗೆ ಸಂಬಂಧಿಸಿದ ದಾವೆಯ ದೃಢೀಕೃತ ಪ್ರತಿಯಾಗಿರುತ್ತದೆ. ಅದರ ಹೊರತಾಗಿ ನಾನು ಬೇರೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಮತ್ತು ನನ್ನ ಸಹೋದರಿಯರು ಒಮ್ಮೆ ವಿಭಾಗ ಪತ್ರ ಮಾಡಿಕೊಟ್ಟಿದ್ದು ನಂತರ ನಮ್ಮ ಚಿಕ್ಕಪ್ಪನ ಮಕ್ಕಳೊಂದಿಗೆ ಇನ್ನೊಂದು ವಿಭಾಗ ಪತ್ರ ಮಾಡಿಕೊಂಡಿದ್ದು, ಈಗ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ನಾನು ಒಮ್ಮೆ ಮಾತ್ರ

ದೇವನಹಳ್ಳಿಯಲ್ಲಿ ನೋಂದಣೆ ಮಾಡಿದ ವಿಭಾಗ ಪತ್ರಕ್ಕೆ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತೇನೆ. ದೇವನಹಳ್ಳಿ ಆಸ್ತಿಗಳೂ ಸಹ ಒಟ್ಟು ಕುಟುಂಬದ ಸ್ವತ್ತುಗಳಾಗಿದ್ದು ಅವುಗಳನ್ನು ಈಗಾಗಲೇ ವಿಭಾಗ ಮಾಡಿಕೊಂಡಿದ್ದು, ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.53 ಯಾವ ದಾಖಲೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.54 ನಮ್ಮ ತಂದೆ ಎಲ್ಲಾ ಸ್ವತ್ತುಗಳ ಬಗ್ಗೆ ಮಾಡಿಕೊಟ್ಟ ವಿಲ್ ನಾಮೆಯಾಗಿರುತ್ತದೆ. ಸದರಿ ಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಗಳಾಗಿರುವುದರಿಂದ ವಿಲ್ ನಾಮೆ ಬರೆದುಕೊಡಲು ನಮ್ಮ ತಂದೆಗೆ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯವರು ಅವರ ಜೀವಿತಾವಧಿಯಲ್ಲಿ 5 ರಿಂದ 7 ನೇ ಪ್ರತಿವಾದಿಗಳ ಹೆಸರಿನಲ್ಲಿ ಫಿಕ್ಸ್ಡ್ ಡಿಪಾಸಿಟ್ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ರೇವಣ್ಣ ಅವರ ಹೆಸರಿನಲ್ಲಿ ಹಾಗೆ ನಿಶ್ಚಿತ ಠೇವಣಿ ಇಟ್ಟಿದ್ದರು ಎಂದರೆ ಸೃಷ್ಟಿ ಮಾಡಿದ ದಾಖಲೆ ಎಂದು ನುಡಿಯುತ್ತೇನೆ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ಗೊತ್ತಿದ್ದೂ ಸಹ ನಾನು ಮತ್ತು ನನ್ನ ಸಹೋದರಿಯರು ಸೇರಿ ಸುಳ್ಳು ದಾವೆ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ನಮ್ಮ ತಂದೆಯ ಭಾಗದಲ್ಲಿ ಮಾತ್ರ ಹಕ್ಕು ಉಳ್ಳವರಾಗಿರುತ್ತೇವೆ, ಎಲ್ಲಾ ಆಸ್ತಿಗಳಲ್ಲಿ ಅಲ್ಲ ಎಂದರೆ ಸರಿಯಲ್ಲ. ಎಲ್ಲಾ ಮಾಹಿತಿ ಇದ್ದರೂ ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲಾ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**